# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ:57/2015

**ಪಿಡಬ್ಲೂ : 02**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ : 11-02-2020 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.
ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ.ಎಸ್.ಎಚ್.ಸಿ ವಕೀಲರಿಂದ :

ಈ ದಿನ ನ್ಯಾಯಾಲಯಕ್ಕೆ ನನ್ನನ್ನು ವಾದಿಯು ಕರೆದುಕೊಂಡು ಬಂದಿರುತ್ತಾನೆ. ವಾದಿಗೆ ಅಕ್ಕತಂಗಿಯವರು ಇಲ್ಲ ಆದರೆ 5 ಜನ ಅಣ್ಣತಮ್ಮಂದಿರು ಇರುತ್ತಾರೆ. ಅವರು ಯಾರ್‍ಯಾರು ಎಂದರೆ ಹನುಮಂತಪ್ಪ, ಭಜ್ಜಪ್ಪ, ದಾನಪ್ಪ, ರೇವಣಸಿದ್ದಪ್ಪ ಮತ್ತು ತುಮನಪ್ಪ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಅವು ಎಷ್ಟು ಎಕರೆಯಿಂದ ಕೂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆದೇ ರೀತಿ ಅವರ ಮನೆತನಕ್ಕೆ ಎಷ್ಟು ಮನೆಗಳು ಇರುತ್ತವೆ ಎಷ್ಟು ನಿವೇಶನಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ವಾದಿಯು ಎಲ್ಲಿ ಇರುತ್ತಾರೆ ಎಂದರೆ ಅವರ ಅಣ್ಣತಮ್ಮಂದಿರ ಮನೆಯಲ್ಲಿ ಇರುತ್ತಾರೆ. ಭಜ್ಜಪ್ಪನ ಹೆಂಡತಿಯ ಮನೆಯು ಅದೇ ಊರಿನಲ್ಲಿ ಇರುತ್ತದೆ ಎಂದರೆ ಸರಿ. ವಾದಿಯು ಹೆಂಡತಿಯ ಮನೆತನಕ್ಕೆ ಹೋಗಿರುತ್ತಾರೆ ಎಂದರೆ ಇಲ್ಲ. 1996 ರ ಪಾಲು ಪಟ್ಟಿಯ ಪ್ರಕಾರವಾಗಿ ಒಂದನೇ ಪ್ರತಿವಾದಿಯು ಎಷ್ಟು ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿ 8 ಎಕರೆ 30 ಸೆಂಟ್ಸ್ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾಲ್ಕನೇ ಪ್ರತಿವಾದಿಯ ಗಂಡ ದಾನಪ್ಪ 8 ಎಕರೆ 03 ಸೆಂಟ್ಸ್ ಜಮೀನನಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ರೇವಣಸಿದ್ದಪ್ಪ 8 ಎಕರೆ 4 ಸೆಂಟ್ಸ್ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ 5 ಜನ ಸೇರಿ ಸಾಗುವಳಿ ಮಾಡುತ್ತಿದ್ದಾರೆ. ತುಮನಪ್ಪ 13 ಎಕರೆ 5 ಸೆಂಟ್ಸ್ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ 5 ಜನರು ಸೇರಿ ಸಾಗುವಳಿ ಮಾಡುತ್ತಿದ್ದಾರೆ. 2 ಎಕರೆ 90 ಸೆಂಟ್ಸ್ ಜಮೀನನ್ನು ವಾದಿಯು ಸಾಗುವಳಿ ಮಾಡುತ್ತಿದ್ದು ಆತನ ಹೆಸರಿಗೆ ಖಾತೆಯು ಕೂಡ ಇರುತ್ತದೆ ಎಂದರೆ ಸುಳ್ಳು. ವಾದಿಯು ಅವರ ಅಣ್ಣತಮ್ಮಂದಿರೊಂದಿಗೆ ದಿ:28-06-1996 ರಂದು ಪಾಲು ವಿಭಾಗ ಮಾಡಿಕೊಂಡು ಅದರಂತೆ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ವಾದಿಯ ಕುಟುಂಬಸ್ಥರು ಬರವಣಿಗೆ ಮಾಡಿಕೊಂಡು ವ್ಯವಹಾರ ಮಾಡುವ ಬಗ್ಗೆ ನಿಮಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಅವರ ಮನೆತನದಲ್ಲಿ ಮಾಡಿಕೊಳ್ಳುವ ವ್ಯವಹಾರವು ನಿಮಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ದಿ:28-06-1996 ರಂದು ವಾದಿ ಮತ್ತು ವಾದಿಯ ಕುಟುಂಬಸ್ಥರು ಪಾಲು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ ಆದೇ ರೀತಿಯಾಗಿ ಅವರು ಅ ಪಾಲು ಪಟ್ಟಿಯ ಪ್ರಕಾರವಾಗಿ ಸಾಗುವಳಿ ಮಾಡುತ್ತಿರುವ ವಿಚಾರವು ನನಗೆ

ಗೊತ್ತಿಲ್ಲ. ವಾದಿ ಮತ್ತು ವಾದಿಯ ಅಣ್ಣತಮ್ಮಂದಿರು ಆ ಪಾಲು ವಿಭಾಗದ ಪ್ರಕಾರವಾಗಿಯೇ ಸಾಗುವಳಿ ಮಾಡಿಕೊಂಡಿದ್ದು ಅವರು ಸಾಗುವಳಿ ಮಾಡುತ್ತಿರುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ.

ವಾದಿಯ ಮನೆಯಿಂದ ನಿಮ್ಮ ಮನೆಯು ಎಷ್ಟು ದೂರವಾಗುತ್ತದೆ ಎಂದರೆ ಅವರು ಆ ಕಡೆ ಮನೆಯ ಸಂದಿಯಲ್ಲಿ ಇರುತ್ತಾರೆ ನಾನು ಈ ಕಡೆ ಮನೆಯ ಸಂದಿಯಲ್ಲಿ ಇರುತ್ತೇನೆ. ವಾದಿಯು ಹಾಕಿರುವ ಆಸ್ತಿಗಳಲ್ಲಿ ಹಿರಿಯರ ಆಸ್ತಿಗಳು ಯಾವ್ಯಾವು ಮತ್ತು ಸ್ವಂತ ಆಸ್ತಿಗಳು ಯಾವ್ಯಾವು ಎಂದು ನಿಮಗೆ ಹೇಳಲು ಬರುತ್ತದೆ ಎಂದರೆ ಹೌದು. ಅವುಗಳ ಸರ್ವೆ ನಂಬರ್ ನನಗೆ ಗೊತ್ತು ಆ ಸರ್ವೆ ನಂಬರ್‌ಗಳು ಯಾವ್ಯಾವು ಎಂದರೆ ಸರ್ವೆ ನಂಬರ್ 03 5 ಎಕರೆ ಚಿಲ್ಲರೆ ಇರುತ್ತದೆ. ಸರ್ವೆ ನಂಬರ್ 15 11 ಎಕರೆ ಚಿಲ್ಲರೆ ಇರುತ್ತದೆ. ಆದೇ 15 ನೇ ಸರ್ವೆ ನಂಬರ್‌ನಲ್ಲಿ 1 ಎಕರೆ ಚಿಲ್ಲರೆ ಇರುತ್ತದೆ ಇದು ಮುಂಚೆ ಇರುವ ಆಸ್ತಿ.

ಇವುಗಳಲ್ಲಿ ಒಂದನೇ ಪ್ರತಿವಾದಿಯ ಸ್ವಂತ ಆಸ್ತಿಗಳು ಯಾವ್ಯಾವು ಎಂದು ನನಗೆ ಗೊತ್ತಿಲ್ಲ. ಐಟಂ ನಂಬರ್ 4 ರಿಂದ 8 ರ ಆಸ್ತಿಗಳು ಒಂದನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಅವೆಲ್ಲಾವು ಪಿರ್ತಾಜಿತ ಆಸ್ತಿಗಳು. 1996 ನೇ ಸಾಲಿನಲ್ಲಿ ಪಾಲು ಪಟ್ಟಿಯಾದ ಮೇಲೆ ಒಂದನೇ ಪ್ರತಿವಾದಿಯು ಐಟಂ ನಂಬರ್ 4 ರಿಂದ 8 ರ ಆಸ್ತಿ ಹಾಗೂ ಡೋರ್ ನಂಬರ್ 30 ನ್ನು ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂಬರ್ 4 ರಿಂದ 8 ಹಾಗೂ ಡೋರ್ ನಂಬರ' 30 ಒಂದನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದು ಗೊತ್ತಿದ್ದರೂ ಸಹ ಅವುಗಳನ್ನು ತಾವು ನೋಡಿದ್ದರೂ ಸಹ ಸ್ವಂತ ಆಸ್ತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ನಿಮಗೆ ಏನಾಗಬೇಕು ಎಂದರೆ ಅವರು ಕುರುಬರು ನಾವು ಉಪ್ಪಾರರು. ವಾದಿಯು ಮತ್ತು ಪ್ರತಿವಾದಿಗಳು ವಿಭಾಗವನ್ನು ಮಾಡಿಕೊಂಡು ಅದರಂತೆ ಸಾಗುವಳಿ ಮಾಡುತ್ತಿರುವ ವಿಚಾರ ನಿಮಗೆ ಗೊತ್ತಿದ್ದರೂ ಸಹ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

ಎಸ್ ಕೆ
ಬೆರಳಚ್ಚುಗಾರರು.